**ದಿನಾಂಕಃ 03.04.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

ಹೆಸರುಃ ಗಣೇಶ್

ತಂದೆಯ ಹೆಸರುಃ ಲೇಟ್ ಕೃಷ್ಣಪ್ಪ

ವಯಸ್ಸುಃ 43

ವೃತ್ತಿಃ ಕಾಂಟ್ರಕ್ಟರ್

ವಾಸಃ ಕೋಡಿಹಳ್ಳಿ, ಬೆಂಗಳೂರು

**ಮುಖ್ಯವಿಚಾರಣೆಃ ಶ್ರೀ.ಎಸ್.ಕೆ ವಕೀಲರಿಂದ ಆರೋಪಿಯ ಪರವಾಗಿ.**

ನಾನು ಮತ್ತು ನನ್ನ ಹೆಂಡತಿ ಪಾಲುದಾರರಾಗಿ ನೇಹ ಎಂಟರ್ ಪ್ರೈಸಸ್ ಎನ್ನುವ ಕಂಪನಿಯನ್ನು 2010 ರಲ್ಲಿ ಪ್ರಾರಂಭಿಸಿದ್ದೆವು. ನಾನು ಡೆವಲೆಪರ್ಸ್ ರವರಿಂದ ಕಾಂಟ್ರಕ್ಟಗಳನ್ನು ಪಡೆದು ಕೆಲಸ ಮಾಡಿಸುತ್ತಿದ್ದೆವು.? ಕೆಲಸ ಮುಗಿದ ನಂತರ ಚೆಕ್ ಮುಖಾಂತರವೆ ಎಲ್ಲರಿಗೂ ವೇತನ ನೀಡುತ್ತಿದ್ದೆವು. ಪಿರ್ಯಾದಿಯು ನಮ್ಮ ಸಂಬಂಧಿಸಿಕರಾಗಿದ್ದು ಅವರ ಹಾಗೂ ನಮ್ಮ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ನಿಪಿಃ2 ರಲ್ಲಿರುವ ಸಹಿ ನನ್ನ ಹೆಂಡತಿಯದಾಗಿದ್ದು ಚೆಕ್ಕು ಕಂಪನಿಯದಾಗಿರುತ್ತದೆ. ಪಿರ್ಯಾದಿಯು ಸುಳ್ಳು ದೂರನ್ನು ನನ್ನ ವಿರುದ್ದ ದಾಖಲಿಸಿದ್ದು, ಸದರಿ ಚೆಕ್ ಪಿರ್ಯಾದಿಯ ಬಳಿ ಹೇಗೆ ಹೋಗಿದೆ ಎಂದು ನನಗೆ ಮಾಹಿತಿ ಇಲ್ಲ. ಬ್ಯಾಂಕಿನಿಂದ ಮಾಹಿತಿ ಬಂದ ನಂತರವೇ ನನಗೆ ಚೆಕ್ ಪಿರ್ಯಾದಿಯ ಬಳಿ ಇರುವ ವಿಚಾರ ತಿಳಿದಿರುತ್ತದೆ. ನನಗೆ ಬ್ಯಾಂಕ್ ನವರು ಕರೆ ಮಾಡಿದ್ದು, ತಕ್ಷಣ ನಾನು ಸದರಿ ಚೆಕ್ಕು ನಗದಿಕರಣವಾಗದಂತೆ ತಡೆಹಿಡಿಯಲು ನಾನು ತಿಳಿಸಿರುತ್ತೇನೆ. ಇದರ ಬಗ್ಗೆ ನನ್ನ ಹೆಂಡತಿಯನ್ನು ಕೇಳಿದಾಗ ಭದ್ರತೆಗಾಗಿ ಅಣ್ಣನಾದ ಧನಂಜಯ ರೆಡ್ಡಿಯವರಿಗೆ ಸದರಿ ಚೆಕ್ಕನ್ನು ನೀಡಿರುವುದಾಗಿ ತಿಳಿಸಿದ್ದಾರೆ. ಪಿರ್ಯಾದಿ ಜೊತೆ ನನಗೆ ಯಾವುದೇ ವ್ಯವಹಾರ ಇರುವುದಿಲ್ಲ. ನನಗೆ ಯಾವುದೇ ಡಿಮ್ಯಾಂಡ್ ನೋಟೀಸ್ ಬಂದಿರುವುದಿಲ್ಲ.

2. ನಮ್ಮ ಕಂಪನಿಯ ಪಾರ್ಟನರ್ ಶಿಫ್ಟ್ ಡೀಡ್ ಪ್ರಕಾರವಾಗಿ ನನ್ನ ಹೆಂಡತಿಯು ಯಾವುದಾದರೂ ವ್ಯವಹಾರ ಮಾಡಬೇಕಾದರೆ ನನ್ನ ಅನುಮತಿ ಪಡೆದು ನಂತರ ವ್ಯವಹಾರ ಮಾಡಬೇಕಾಗಿರುತ್ತದೆ. ಸದರಿ ಪಾರ್ಟನರ್ ಶಿಫ್ಟ್ ಡೀಡ್‌ನ್ನು ಹಾಜರುಪಡಿಸಿದ್ದು, ಅದನ್ನು ನಿಡಿಃ7 ಎಂದು ಹಾಗೂ ಸಂಬಂಧಿಸಿದ ಖಂಡಿಕೆ 1 ನಿಡಿಃ7 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು (ನಿಡಿಃ7 ನ್ನು ಆರೋಪಿಯ ಪ್ರಮಾಣಿಕರಿಸಿ

ನೀಡಿರುವ ಕಾರಣ ಅದನ್ನು ತಕರಾರಿಗೆ ಒಳಪಡಿಸಲಾಗಿದೆ). ನಮ್ಮ ಕಂಪನಿಯ ನೊಂದಣಿ ಪತ್ರ ನಿಡಿಃ8 ಎಂದು ಗುರುತಿಸಲಾಯಿತು. ಆದ್ದರಿಂದ ದೂರನ್ನು ವಜಮಾಡಬೇಕು ಎಂದು ಕೋರುತ್ತೇನೆ.

**ವಕೀಲರ ವಿನಂತಿಯ ಮೇರೆಗೆ ಪಾಟೀಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.